(SRI S. KARIYAPPA)

(*c*) the amount spent on this portion of the channel, including relieving weirs, pipe bridge, etc., which has fallen into disuse;

(*d*) whether Government intend to leave this portion unused permanently or going to raise the body wall in order to take water to the farthest end;

(*e*) if not, the other alternative proposal, Government has in view ?

A.—Sri ALUR HANUMANTHAPPA (Deputy Minister for Minor Irrigation).—

(*a*) One mile each.
(*b*) No.
(*c*) Does not arise in view of reply to clause (*b*).
(*d*) Does not arise in view of reply to clause (*b*).
(*e*) Does not arise in view of reply to clause (*b*).

ಶ್ರೀ ಎಸ್. ಕರಿಯಪ್ಪ.—ನನ್ನ ಪ್ರಶ್ನೆ (ಅ) ಗೆ 'ಇರ್ಲಾ' ಎಂದು ಉತ್ತರ ಹೇಳಿದೆ. ಹಾಗಾದರೆ ಈ ಕಾರ್ಯ ಪೂರ್ತಿ ನಿಂತು ಹೋಗಿದೆಯೇ ?

† ಶ್ರೀ ಆಲೂರು ಹನುಮಂತಪ್ಪ.—ಇರ್ಲಾ.

ಶ್ರೀ ಎಸ್. ಕರಿಯಪ್ಪ.—ಅಲ್ಲಲ್ಲಿ ನೀರು ತೆಗೆದುಕೊಂಡು ಹೋಗುವುದಕ್ಕೆ ಪೈಪ್ ಹಾಕಿದೆ. ಅರ್ಧ ಭಾಗದಷ್ಟು ನಾಲೆ ಕೆಲಸ ಆಗಿದ್ದರೂ ಕೂಡ ಕಾಲುವೆ ಮಾಡಿಲ್ಲ. ಎಲ್ಲಿಯಾದರೂ ನೀರು ಕೊಟ್ಟಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—35 ಎಕರೆಯಷ್ಟು ಡೆವಲಪ್ ಆಗಿದೆ. ರೆಫ್ಟ್ ಬ್ಯಾಂಕ್ ಚಾನೆರ್ ಎಕ್ಸ್‌ಟೆಂಡ್ ಮಾಡಬೇಕೆಂಬ ಉದ್ದೇಶ ಇದೆ.

Restoration of Bhuthana Katte Tank in Arasikere Taluk.

*Q.—84. Sri H. R. KESHAVA MURTHY (Gandasi).—

Will the Minister for Public Works be pleased to state :—

(*a*) whether it is a fact that the restoration of Buthana Katte tank in Arasikere Taluk was taken up for the first time, during the year 1939-40;

(*b*) the extent of land coming under submersion after the restoration of the above tank;

(*c*) the amount of compensation proposed for the land owners;

(*d*) whether the amount has been paid to the land owners if not, why ?

A.—Sri ALUR HANUMANTHAPPA (Deputy Minister for Minor Irrigation).—

(*a*) Yes.
(*b*) 115 Acres and 15¼ Guntas.

(c) Will be determined at the time of passing awards.

(d) No. Since the acquisition proceedings have not yet been finalised.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಈ ಕೆರೆ ಒಡೆದು 27 ವರ್ಷವಾಯಿತು. ಅಲ್ಲಯ ರೈತರಿಗೆ ಪರಿಹಾರ ಕೊಟ್ಟಿಲ್ಲ ಅವರ ಗತಿ ಏನು ? ಬೇರೆ ಕಡೆಯೂ ಜಮೀನು ಕೊಟ್ಟಿಲ್ಲ. ಯಾವಾಗ ಕೊಡುತ್ತೀರಿ ? ಏನು ಪರಿಹಾರ ಕೊಡುತ್ತೀರಿ ?

†ಶ್ರೀ ಆಲೂರು ಹನುಮಂತಪ್ಪ.—1963ನೇ ಇಸವಿಯಲ್ಲಿ ಕೆರೆ ಕಟ್ಟೆ ಒಡೆದು ಹೋಯಿತು. ಐವತ್ತು ನಾಲ್ಕು ಸಾವಿರ ರೂಪಾಯಿ ಖರ್ಚು ಮಾಡಿ ಕೆರೆ ರಿಸ್ಟೋರೇಷನ್ ಮಾಡಿದೆ. ರೈತರಿಗೆ ಕಾಂಪೆನ್‌ಸೇಷನ್ ಕೊಡಬೇಕಾಗಿದೆ. ಈಗಾಗಲೇ ಪ್ರೊಸೀಡಿಂಗ್ಸ್ ನಡೆಯುತ್ತಿವೆ. 22,620 ರೂಪಾಯಿ ಪರಿಹಾರ ಹಣ ಒದಗಿಸುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—1939ನೇ ಇಸವಿಯಲ್ಲಿ ಒಡೆದು ಹೋಗಿದ್ದ ಕೆರೆಯನ್ನು ಸರಿಮಾಡಿದರಾಗಾಯ್ತು ನುಮಾರು 115 ಎಕರೆಯಲ್ಲಿ ನೀರು ನಿಂತಿದ್ದು ಆಗಿನಿಂದಲೂ ಕೂಡ ರೈತರು ತಮಗೆ ಪರಿಹಾರವನ್ನು ಕೊಡಿಸಬೇಕೆಂದು ಕೇಳುತ್ತಿದ್ದರೂ ಕೂಡ ಪಬ್ಲಿಕ್‌ವರ್ಕ್ಸ್ ಇಲಾಖೆ ಮತ್ತು ರೆವೆನ್ಯೂ ಇಲಾಖೆಗಳ ಮಧ್ಯೆ ರಿಕಾರ್ಡು ಓಡಾಡುತ್ತಿದ್ದು 27 ವರ್ಷಗಳಾದರೂ ಪರಿಹಾರವನ್ನು ಕೊಟ್ಟಿಲ್ಲ. ಈ ಜಮೀನುಗಳ ರೈತರಿಗೆ ಯಾವಾಗ ಪರಿಹಾರವನ್ನು ಕೊಡುತ್ತಾರೆ ಎಂದು ಹೇಳುತ್ತಾರೆಯೆ, ಸ್ವಾಮಿ?

ಶ್ರೀ ಆಲೂರು ಹನುಮಂತಪ್ಪ.—1939-40ನೇ ಇಸವಿಯಲ್ಲಿ 8,840 ರೂಪಾಯಿಗಳ ವೆಚ್ಚದಲ್ಲಿ ಬ್ರೀಚ್ ಫಿಲಪ್ (breach fill up) ಮಾಡಿದ್ದಾರೆಂದು ತಿಳಿದು ಬಂದಿದೆ.—ಈಚೆಗೆ 1963ರಲ್ಲಿ ಪುನಃ ಅದೇ ಕೆರೆ ಒಡೆದು ಹೋದಾಗ 54,000 ರೂಪಾಯಿ ಖರ್ಚು ಮಾಡಿ ಸರಿಪಡಿಸಲಾಯಿತು. ಸರ್ಕಾರದವರು 1957ನೇ ಇಸವಿಯಿಂದೀಚೆಗೆ ಜನರಿಗೆ ಪರಿಹಾರವನ್ನು ಕೊಡುವುದಕ್ಕೆ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ನಡೆದಿದೆ.

Mr. SPEAKER.—The question implies that acquisition proceedings commenced in 1939-40 which means 26 years earlier. From the reply it is seen that it has commenced from 1957 and thereafter; between the two which is proper ?

Sri H. R. KESHAVA MURTHY.—1939-40 is the date of filling the breach and water is standing and submersion took place then.

Sri ALUR HANUMANTHAPPA.—When the tank was restored by spending about Rs. 8,820 there was a breach and the entire tank bed was under cultivation under nek-sal. There was no urge from the persons in whose custody it was. They were not very keen for taking compensation. Later on they wanted compensation. So, Government built up the record for compensation during the year 1957. Since then the acquisition proceedings are going on. Again in 1963 the same tank breached. By incurring an expenditure of Rs. 54,000 the tank was restored.

Mr. SPEAKER.—I am not concerned with the amount spent for restoration. When did the submersion take place and when did the acquisition proceedings begin ?

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—1957ನೆ ಇಸವಿಯಲ್ಲಿ ಅಕ್ವಿಸಿಷನ್ ಪ್ರೊಸಿಡಿಂಗ್ಸ್ ಪ್ರಾರಂಭವಾಯಿತು. ಇದಕ್ಕೆ ಸಂಬಂಧಪಟ್ಟ ಹಾಗೆ ನನ್ನ ಮುಂದಿರುವ ನೋಟ್ ಪ್ರಕಾರ ಈ ಸಂದರ್ಭದಲ್ಲಿ ಅಕ್ವಿಸಿಷನ್ ಕಾರ್ಯಕ್ರಮದಲ್ಲಿ ಬಹಳ ನಿಧಾನವಾಗಿದೆ ಎಂದು ನನಗನ್ನಿಸುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ರೆವೆನ್ಯೂ ಇಲಾಖೆಯವರು ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಇವರಲ್ಲಿ ಹೊಂದಾಣಿಕೆ ಇಲ್ಲದೆ ಬಹಳ ಕಾಲ ಕಳೆದು

(ಶ್ರೀ ವೀರೇಂದ್ರ ಪಾಟೀಲ್)

ಹೋಗಿದೆ ಎಂದು ನನಗನ್ನಿಸುತ್ತದೆ. ಈಗಾಗಲೇ ಸಾಕಷ್ಟು ಸಮಯ ಹೋಗಿದೆ. ಇದರಲ್ಲಿ ನಮಗೆ ಕಷ್ಟ ಏನಾಗುತ್ತದೆ ಎಂದರೆ, ಇದಕ್ಕೆ ಬೇಕಾಗುವ ಹಣವನ್ನು ಒದಗಿಸಿದರೂ ಲ್ಯಾಂಡ್ ಅಕ್ವಿಸಿಷನ್ ಬಹಳ ತೊಡಕಿನ ರೀತಿಯಲ್ಲಿರುವುದರಿಂದ ನಿಧಾನವಾಗಿದೆ. ಎಷ್ಟಾದರೂ 27 ವರ್ಷ ತೆಗೆದುಕೊಳ್ಳಬಾರದು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು.—ಯಾವ ವರ್ಷದಲ್ಲಿ ಸಬಮರ್ಜ ಆಯಿತು?

ಶ್ರೀ ವೀರೇಂದ್ರ ಪಾಟೀಲ್.—ಆ ಲೆಕ್ಕದಿಂದ ತೆಗೆದುಕೊಂಡರೆ 1939-40 ಬರುತ್ತದೆ. ಬಹುತಃ 2-3 ವರ್ಷದ ನಂತರ ಕಾರ್ಯಕ್ರಮ ತೆಗೆದುಕೊಂಡಿರುತ್ತಾರೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಇಂತಹ ಕೇಸುಗಳು ಅನೇಕ ಇವೆ. 20-30 ವರ್ಷಗಳ ಹಿಂದೆ ರಸ್ತೆ, ಕೆರೆ, ಇಂಥವುಗಳಿಗೆ ತೆಗೆದುಕೊಂಡ ಜಮೀನುಗಳಿಗೆ ಪರಿಹಾರವನ್ನು ಕೊಡದೆ ಇರುವುದಲ್ಲದೆ ಕಂದಾಯವನ್ನು ಕೂಡ ವಸೂಲು ಮಾಡಿದ್ದಾರೆ. ಈ ಅನ್ಯಾಯ ಅನೇಕ ಕಡೆ ನಡೆದಿದೆ. ಇದನ್ನು ಆದಷ್ಟು ಬೇಗ ಸರಿಪಡಿಸಬೇಕು.

Mr. SPEAKER.—This matter covered by this interpellation should be disposed of early.

ಶ್ರೀ ಎಸ್. ನಿಜಲಿಂಗಪ್ಪ.—ಇನ್ನು ಆರು ತಿಂಗಳೊಳಗಾಗಿ ಬಗೆಹರಿಸುತ್ತೇವೆ. ಈ ರೀತಿ ನಿಧಾನವಾಗಿರುವುದು ನಿಜ. ಇದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಸಾಕಷ್ಟು ಪ್ರಮಾಣದಲ್ಲಿ 20-30 ವರ್ಷಗಳಿಂದ ನಡೆದಿದೆ. ಇಂಥದನ್ನೆಲ್ಲ ಸರಿಪಡಿಸಬೇಕೆಂದು ಸರ್ಕಾರದ ಆಜ್ಞೆಯಾಗಿದೆ. ಒಂದೊಂದಾಗಿ ಸರಿಪಡಿಸುತ್ತಿದ್ದಾರೆ.

Steps taken to prevent post Devaluation Price Rise.

*Q.—38. Sri A. KRISHNA SHETTY (Mangalore-II).—

Will the Chief Minister be pleased to state :—

the steps taken by the Government to prevent post devaluation price rise in essential commodities ?

A.—Sri S. NIJALINGAPPA (Chief Minister).—By issue of orders controlling and/or regulating prices wherever necessary.

ಶ್ರೀ ಎ. ಕೃಷ್ಣ ಶೆಟ್ಟಿ.—ಬೆಲೆ ಏರಿಕೆಯನ್ನು ತಡೆಗಟ್ಟಲು ಸರ್ಕಾರದವರು 50 ಸಾವಿರ ಜನಸಂಖ್ಯೆಗಿಂತ ಹೆಚ್ಚಾಗಿರುವ ಪ್ರದೇಶಗಳಲ್ಲಿ ಜೀವನಾವಶ್ಯಕ ವಸ್ತುಗಳ ಮಾರಾಟ ಮಾಡಲು ಅಂಗಡಿಗಳನ್ನು ತೆರೆದು ಬೆಲೆಗಳನ್ನು ಕಡಮೆ ಮಾಡುವುದರ ಜೊತೆಗೆ ರೈತರಿಗೆ ಕಡಿಮೆ ಬೆಲೆಯಲ್ಲಿ ವಸ್ತುಗಳನ್ನು ಒದಗಿಸುವ ದೆಸೆಯಲ್ಲಿ ನಮ್ಮ ಸರ್ಕಾರ ಏನು ಕೆಲಸ ಮಾಡಿದೆ, ಸ್ವಾಮಿ ?

† ಶ್ರೀ ಎಸ್. ನಿಜಲಿಂಗಪ್ಪ.—ರೂಪಾಯಿ ಬೆಲೆಯು ಕಡಿಮೆಯಾದುದರಿಂದ ಅದರ ಪರಿಣಾಮ ಪಟ್ಟಣಗಳಲ್ಲಿ ಜಾಸ್ತಿಯಾಯಿತು. ಹಳ್ಳಿಗಳಲ್ಲಿ ಪರದೇಶಗಳಿಂದ ತರಿಸುವ ಮಾಲುಗಳನ್ನು ಹೆಚ್ಚಾಗಿ ಉಪಯೋಗಿಸುವುದಿಲ್ಲ. 50 ಸಾವಿರ ಜನಸಂಖ್ಯೆ ಮತ್ತು ಅದಕ್ಕೆ ಮೇಲ್ಪಟ್ಟು ಇರುವ ಪಟ್ಟಣಗಳಲ್ಲಿ ಏನು ಪರಿಣಾಮವಾಗಿದೆ ಅದನ್ನು ತಡೆಗಟ್ಟುವುದಕ್ಕೆ ಪ್ರಯತ್ನಗಳು ನಡೆದಿವೆ. ಸಾಧಾರಣವಾಗಿ ಸೀಮೆ ಎಣ್ಣೆ, ಹೈಸ್ಪೀಡ್ ಡೀಸೆಲ್, ಲೋಸ್ಪೀಡ್, ಡೀಸೆಲ್, ವೆಜಿಟೆಬಲ್ ಆಯಿಲ್ಸ್, ಜೆಕ್ಸ್‌ಟೈಲ್ಸ್, ಬೇಬಿಫುಡ್ಸ್, ಸೋಪ್ಸ್, ಸೈಕಲ್ ಟೈರ್ಸ್ ಮತ್ತು ಟ್ಯೂಬ್ಸ್, ಪೇಪರ್, ಸ್ಟೇಷನರಿ ಇವು ಹೊರಗಡೆಯಿಂದ ಬಂದು ಅವುಗಳ ಮೌಲ್ಯವು ವ್ಯೆಪರೀತ್ಯಕ್ಕೆ ಹೋಗಿ, ಅವುಗಳ ಬೆಲೆಗಳನ್ನು ಕಡಮೆ ಮಾಡಬೇಕು ಎನ್ನುವುದಕ್ಕೆ ಸಾಕಷ್ಟು ಮಾರ್ಗಗಳನ್ನು ಅನುಸರಿಸಿ ಕ್ರಮ ತೆಗೆದುಕೊಂಡಿದ್ದೇವೆ.